# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2191(2609)
2. ಸದಸ್ಯರ ಹೆಸರು : ಶ್ರೀ ಕೆ.ಎಸ್ ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
3. ಉತ್ತರಿಸಬೇಕಾದ ದಿನಾಂಕ : 24.03.2022.
4. ಉತ್ತರಿಸುವ ಸಚಿವರು : ಜಲಸಂಪನ್ಮೂಲ ಸಚಿವರು

| ಕ್ರ.ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ವಾಣಿ ವಿಲಾಸ ಸಾಗರ ಜಲಾಶಯವನ್ನು ಯಾವಾಗ ನಿರ್ಮಾಣ ಮಾಡಲಾಯಿತು; ಈ ಜಲಾಶಯದಿಂದ ಎಷ್ಟು ಗ್ರಾಮಗಳಿಗೆ ನೀರಾವರಿ ಸೌಲಭ್ಯ ಒದಗಿಸಲಾಗುತ್ತಿದೆ; | ವಿ.ವಿ.ಸಾಗರ ಜಲಾಶಯವನ್ನು 1898ನೇ ಸಾಲಿನಿಂದ ನಿರ್ಮಿಸಲು ಪ್ರಾರಂಭಿಸಿ, 1907ರಲ್ಲಿ ಪೂರ್ಣಗೊಳಿಸಲಾಗಿರುತ್ತದೆ. ಸದರಿ ಜಲಾಶಯದಿಂದ ಹಿರಿಯೂರು ತಾಲ್ಲೂಕಿನ 42 ಗ್ರಾಮಗಳಿಗೆ ನೀರಾವರಿ ಸೌಲಭ್ಯ ಒದಗಿಸಲಾಗುತ್ತಿದೆ. |
| ಆ) | ವಾಣಿ ವಿಲಾಸ ಸಾಗರ ಜಲಾಶಯ ಮತ್ತು ನಾಲೆಗಳು ಅತ್ಯಂತ ಹಳೆಯದಾಗಿದ್ದು, ಶಿಥಿಲಾವಸ್ಥೆ ತಲುಪಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದರ ವ್ಯವಸ್ಥಿತ ನಿರ್ವಹಣೆಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ; | ➢ ವಾಣಿ ವಿಲಾಸ ಸಾಗರ ಜಲಾಶಯ ಮತ್ತು ನಾಲೆಗಳು ಸುಮಾರು 115 ವರ್ಷಗಳ ಕಾಲ ಹಳೆಯದಾಗಿದ್ದು, ಶಿಥಿಲಾವಸ್ಥೆಯಲ್ಲಿರುತ್ತದೆ.<br>➢ ವಾಣಿ ವಿಲಾಸ ಸಾಗರ ಜಲಾಶಯವನ್ನು ವಿಶ್ವ ಬ್ಯಾಂಕ್ ನೆರವಿನ ಅಣೆಕಟ್ಟು ಪುನಶ್ಚೇತನ ಮತ್ತು ಅಭಿವೃದ್ಧಿ ಹಂತ-2 (DRIP-II) ಅಡಿಯಲ್ಲಿ ಗುರುತಿಸಿದ್ದು, ಸದರಿ ಜಲಾಶಯದ ಪಿ.ಎಸ್.ಟಿ. ಯನ್ನು ರೂ.19.00 ಕೋಟಿಗಳಿಗೆ ತಯಾರಿಸಿ ಕೇಂದ್ರ ಜಲ ಆಯೋಗಕ್ಕೆ ಅನುಮೋದನೆ ಕೋರಿ ಸಲ್ಲಿಸಲಾಗಿರುತ್ತದೆ. ಕೇಂದ್ರ ಜಲ ಆಯೋಗದಿಂದ ಸದರಿ ಪಿ.ಎಸ್.ಟಿ. ಕುರಿತಂತೆ ಸ್ವೀಕೃತವಾಗಿರುವ ಅಂಶಗಳಿಗೆ ಪಾಲನಾ ವರದಿ ತಯಾರಿಸಲಾಗುತ್ತಿದೆ. ಸದರಿ ಪಿ.ಎಸ್.ಟಿ ಯಲ್ಲಿ ಜಲಾಶಯದ ಸುರಕ್ಷತೆ ಭದ್ರತೆ ಮತ್ತು ಅಭಿವೃದ್ಧಿ ಕಾಮಗಾರಿಗಳನ್ನು ಅಳವಡಿಸಲಾಗಿರುತ್ತದೆ.<br>➢ ವಾಣಿ ವಿಲಾಸ ಸಾಗರ ಜಲಾಶಯ ನಾಲೆಗಳ ಮತ್ತು Structure ಗಳ ಆಧುನೀಕರಣಗೊಳಿಸುವ ಕಾಮಗಾರಿ ಹಾಗೂ ಸೂಕ್ಷ್ಮ ನೀರಾವರಿ ಪದ್ಧತಿಯನ್ನು ಅಳವಡಿಸುವ ಕಾಮಗಾರಿಗಳನ್ನೊಳಗೊಂಡ ವಿವರವಾದ ಯೋಜನಾ ವರದಿಯನ್ನು ತಯಾರಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ. |
| ಇ) | ಕೇಂದ್ರ ಸರ್ಕಾರದ ಎಸ್‌ಐಎಂಪಿ ಯೋಜನೆಯ ಅನ್ವಯ ಈ ಜಲಾಶಯದ ಆಧುನೀಕರಣಕ್ಕಾಗಿ ಕೈಗೊಂಡ ಯೋಜನೆಗಳೇನು; (ವಿವರ ನೀಡುವುದು) | ವಿ.ವಿ.ಸಾಗರ ಜಲಾಶಯ ಯೋಜನೆಯ ಕಾಲುವೆಗಳ lining ಮಾಡಲು ಹಾಗೂ ನಾಲೆಯ ಉದ್ದಕ್ಕೂ ಇರುವ Structureಗಳ ಆಧುನೀಕರಣಗೊಳಿಸುವ ಹಾಗೂ ಸೂಕ್ಷ್ಮ ನೀರಾವರಿ ಪದ್ಧತಿಯನ್ನು ಅಳವಡಿಸುವ ಸಮಗ್ರ ಕಾಮಗಾರಿಗಳಿಗಾಗಿ SIMP (Support for Irrigation Modernization Programme) ಯೋಜನೆಯಡಿ ಕೈಗೆತ್ತಿಕೊಳ್ಳುವ ಪ್ರಸ್ತಾವನೆಯು ಆರ್ಥಿಕ ಇಲಾಖೆಯಲ್ಲಿ ಪರಿಶೀಲನೆಯಲ್ಲಿದೆ. |

| ಕ್ರ.ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| ಈ) | ವಾಣಿ ವಿಲಾಸ ಸಾಗರ ಜಲಾಶಯಕ್ಕೆ ಯಾವ ಯೋಜನೆಯ ಮೂಲಕ ನೀರಿನ ಪೂರೈಕೆಗೆ ಸರ್ಕಾರವು ಡಿಪಿಆರ್ ತಯಾರಿಸಿದೆ; ಈ ಯೋಜನೆಯ ಯಾವಾಗ ಪೂರ್ಣಗೊಳ್ಳುವುದು; ಇದಕ್ಕೆ ತಗಲುವ ವೆಚ್ಚ ಎಷ್ಟು? | ➢ ವಾಣಿ ವಿಲಾಸ ಸಾಗರ ಜಲಾಶಯಕ್ಕೆ ನೀರಿನ ಪೂರೈಕೆಗೆ, ಭದ್ರಾ ಮೇಲ್ದಂಡೆ ಯೋಜನೆಯಡಿಯಲ್ಲಿ ಬರುವ ವೈಜಂಕ್ಷನ್‌ಯಿಂದ ತುಮಕೂರು ಶಾಖಾ ಕಾಲುವೆಯ ಕಿ.ಮೀ. 34.200 ರಲ್ಲಿ ಬರುವ ಹೆಡ್ ರೆಗ್ಯುಲೇಟರ್ ಮೂಲಕ ವೇದಾವತಿ ನದಿಗೆ ನೀರು ಹರಿಸಲು ಡಿಪಿಆರ್ ನಲ್ಲಿ ಅನುವು ಮಾಡಲಾಗಿರುತ್ತದೆ. ಈ ಕಾಮಗಾರಿಗೆ ತಗಲುವ ವೆಚ್ಚ ಅಂದಾಜು ರೂ.226.10 ಕೋಟಿಗಳಾಗುತ್ತದೆ (ಈ ಕಾಲುವೆ ನಿರ್ಮಿಸುವುದರಿಂದ ತುಮಕೂರು ಶಾಖಾ ಕಾಲುವೆಯ ಅಚ್ಚುಕಟ್ಟು ಪ್ರದೇಶಕ್ಕೆ, ಕೆರೆಗಳನ್ನು ತುಂಬಿಸಲು ಹಾಗೂ ಹನಿ ನೀರಾವರಿ ಕಾಮಗಾರಿಗೂ ಅನುಕೂಲವಾಗುತ್ತದೆ).<br>➢ ಪ್ರಸ್ತುತ ಕಾಲುವೆ ಕಾಮಗಾರಿಯು ಪ್ರಗತಿಯಲ್ಲಿದ್ದು, ಮಾರ್ಚ್-2023 ರ ಅಂತ್ಯಕ್ಕೆ ಪೂರ್ಣಗೊಳಿಸಲು ಯೋಜಿಸಲಾಗಿರುತ್ತದೆ. |

**ಸಂಖ್ಯೆ: ಜಸಂಇ 45 ಡಬ್ಲ್ಯೂಎಲ್ಎ 2022**

(ಗೋವಿಂದ ಎಂ. ಕಾರಜೋಳ)
ಜಲಸಂಪನ್ಮೂಲ ಸಚಿವರು